1	2	3	4	5
3	ಸ್ಲಾಟರ್ ಹೌಸ್		11 80	7 50
4	ಸಿಹಿ ನೀರು ಕೊಳ		5 30	2 40
5	ನಳಬಂಧವಾಡಿ		15 20	1 90
6	ಸರ್ವೆ 620 ಶುಗರ್ ಟೌನ್		30 60	16 00
7	ಪೂರ್ವ ಭಾಗದ ರೈಲ್ವೆ ಗೇಟ್ ಹತ್ತಿರ	ಯುಜಿಡಿ ಚರಂಡಿ ಚಪ್ಪಡಿ	9 50	10 80
8	ವೇಣು ಗೋಪಾಲ ಶಿಶು ವಿಹಾರ	ನೆಲಹಾಸು ಜಲ್ಲಿ ರಸ್ತೆ ನೀರು	6 40	0 00
9	ಗುತ್ತಲು ಹರಿಜನ ಕಾಲೋನಿ	ಸರಬರಾಜು ಬೀದಿದೀಪ ಕಸದ	31 00	6 30
10	ಪಿಕೆ ಕಾಲೋನಿ	ತೊಟ್ಟಿ ಅಡ್ಡಮೋರಿ ಸಮುದಾಯ	6 80	0 00
11	ಸ್ವತಂತ್ರ ಪಾಳ್ಯ	ಭವನ	10 90	1 00
12	ಜಯರಾಮ್ ಲೇಔಟ್		5 50	1 90
13	ಹೊಸಹಳ್ಳಿ ಗುರುಮರ		8 53	1 60
	ಒಟ್ಟು		182 23	65 65

ಸೇಡಂ ನಗರದ ಪದವಿ ಮಹಾವಿದ್ಯಾಲಯಕ್ಕೆ ಪೀರೋಪಕರಣಗಳ ವ್ಯವಸ್ಥೆ

114 (497) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ. (ಸೇಡಂ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲಗರ್ಗ ಜಿಲ್ಲೆಯು ಸೇಡಂ ನಗರದ ಪದವಿ ಮಹಾವಿದ್ಯಾಲಯದ ಪೀರೋಪಕರಣಗಳಿಗಾಗಿ ಏನಾದರೂ ಹಣ ಸರ್ಕಾರದ ವತಿಯಿಂದ ಮಂಜೂರಾಗಿದೆಯೇ

ಆ) ಮಂಜೂರಾಗದಿದ್ದಲ್ಲಿ ಈ ಪೀರೋಪಕರಣಗಳನ್ನು ತರಿಸಲಾಗಿದೆಯೇ ಇಲ್ಲವೆಂದರೆ ವಿವರ ನೀಡುವುದು?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಆಗಿದೆ

ಆ) ರೂ 15000/– ಗಳನ್ನು ತರಗತಿ ಪೀರೋಪಕರಣ ಖರೀದಿಗಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಕಾಲೇಜಿನ ಪ್ರಾಂಶುಪಾಲರು ಈ ಅನುದಾನದಲ್ಲಿ ತರಗತಿ ಪೀರೋಪಕರಣಗಳನ್ನು ಖರೀದಿಸಿರುತ್ತಾರೆ

ಕಲಾವಿದರಿಗೆ ಮಾಶಾಸನ ನೀಡಿಕೆ

116 (500) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರ ಕಲಾವಿದರಿಗೆ ಮಾಸಾಶನ ನೀಡುತ್ತಿರುವುದು ನಿಜವೇ ಪ್ರತಿ ಕಲಾವಿದರಿಗೆ ನೀಡುತ್ತಿರುವ ಮಾಸಾಶನ ಎಷ್ಟು

ಆ) ಎಷ್ಟು ಜನ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ

ಇ) ಮಾಸಾಶನ ಹೆಚ್ಚಳ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ ಎಷ್ಟು ಹೆಚ್ಚಳ ಮಾಡಲಾಗುವುದು ಯಾವಾಗಿನಿಂದ ಅನ್ವಯಿಸುವಂತೆ ಹೆಚ್ಚಳ ಮಾಡಲಾಗುವುದು?